ಸಿ ಸಿ. ನಂಃ **550/2025**
ಪಿ.ಡಬ್ಲ್ಯೂಃ **1**

ದಿನಾಂಕ **13-03-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ: ಶ್ರೀ. ಎ ಎಸ್ ಪಿ ವಕೀಲರಿಂದಃ</u>

ಆರೋಪಿ ನನಗೆ ಚೆಕ್ ನೀಡುವ ಸಮಯದಲ್ಲಿ ಆತನ ತಂಗಿಯೂ ಸಹ ಹಾಜರಿದ್ದರು. ನನಗೆ ಅವರ ತಂಗಿಯ ಹೆಸರು ನೆನಪಿಲ್ಲ. ಆರೋಪಿಯ ತಂಗಿಯ ಹೆಸರು ಜೈನುಲಾ ಆಯಿನ್ ಎಂದು ಇರುತ್ತದೆ ಎಂದರೆ ಸರಿ. ಆರೋಪಿ ನಿಮಗೆ ದಿನಾಂಕ 12.01.2025 ರಂದು ಚೆಕ್ ನೀಡಿದ್ದಾರೆ ಎಂದು ನೀವು ಈ ಹಿಂದೆ ಸಾಕ್ಷ ನುಡಿದಿದ್ದು, ಆರೋಪಿ ದಿನಾಂಕ 12.01.2025 ರಂದು ದಿನಾಂಕ ನಮೂದಿಸಿ ಚೆಕ್ ಕೊಟ್ಟಿರುತ್ತಾರೆಯೇ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿದ ದಿನಾಂಕ ಈಗ ನನಗೆ ನೆನಪಿಲ್ಲ. ಚೆಕ್ಕನ್ನು ಹಾಜರು ಪಡಿಸಿದ ದಿನವೇ ಬ್ಯಾಂಕಿನವರು ಅದನ್ನು ಹಿಂಬರಹದೊಂದಿಗೆ ಮರಳಿ ನೀಡಿದ್ದರು. ಆರೋಪಿಗೆ ವಕೀಲರ ನೋಟಿಸ್ ಕಳುಹಿಸಿದ ದಿನಾಂಕ ನನಗೆ ನೆನಪಿಲ್ಲ. ಆರೋಪಿಗೆ ನೋಟಿಸ್ ಯಾವ ದಿನಾಂಕದಂದು ಜಾರಿಯಾಗಿದೆ ಎಂದರೆ ಸಾಕ್ಷಿ ನನಗೆ ಯಾವುದೇ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಈ ದೂರನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ ದಿನಾಂಕ ಸಹ ನನಗೆ ನೆನಪಿಲ್ಲ ಎಂದರೆ ಸರಿ. ಆರೋಪಿ ನೋಟಿಸಿಗೆ ವಕೀಲರ ಮೂಲಕ ಉತ್ತರ ನೀಡಿದ್ದರು ಎಂದರೆ ಸರಿ.

2. ನನ್ನ ಗಂಡನ ಹೆಸರಿನಲ್ಲಿ ಎರಡು ಸಿಮ್ ಗಳು ಇದ್ದಾವೆ ಎಂದರೆ ಸರಿ. ಆ ಪೈಕಿ ಒಂದು ಸಿಮ್ ನಂ.9736626666 ಇರುತ್ತದೆ ಎಂದರೆ ಸರಿ. ಇನ್ನೊಂದು ಸಿಮ್ ನಂ.9164723309 ಇರುತ್ತದೆ ಎಂದರೆ ಸರಿ. ನನ್ನ ಮೊಬೈಲ್ ನಂ.9508766662 ಆಗಿರುತ್ತದೆ. ಆರೋಪಿ ನಿಮ್ಮ ಗಂಡನಿಂದ ಪಡೆದುಕೊಂಡಿದ್ದ ಸಾಲದ ಹಣದ ಪೈಕಿ ರೂ.24,000/- ಹಣವನ್ನು ದಿನಾಂಕ 01.03.2024 ರಂದು ಫೋನ್ ಪೇ ಮೂಲಕ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ಅವರ ವೈಯಕ್ತಿಕ ವ್ಯವಹಾರ ಆಗಿದ್ದು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ದಿನಾಂಕ 01.04.2024 ರಂದು ಆರೋಪಿ ರೂ.30,000/- ಹಣ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 02.04.2024 ರಂದು ಆರೋಪಿ ರೂ.42,000/- ಹಣವನ್ನು ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 02.05.2024 ರಂದು ಆರೋಪಿ

ರೂ.24,000/- ಹಾಗೂ ರೂ.48,000/- ಹಣವನ್ನು ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 02.07.2024 ರಂದು ಆರೋಪಿ ರೂ.72,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 06.08.2024 ರಂದು ಆರೋಪಿ ರೂ.20,000/- ಹಣವನ್ನು ನಿಮ್ಮ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನನ್ನ ಗಂಡನ ವ್ಯವಹಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 07.08.2024 ರಂದು ಆರೋಪಿ ರೂ.20,000/- ಹಾಗೂ ರೂ.10,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 03.08.2024 ರಂದು ಆರೋಪಿ ರೂ.28,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 02.09.2024 ರಂದು ಆರೋಪಿ ರೂ.40,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 03.09.2024 ರಂದು ಆರೋಪಿ ರೂ.15,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 04.09.2024 ರಂದು ಆರೋಪಿ ರೂ.10,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 16.10.2024 ರಂದು ಆರೋಪಿ ರೂ.50,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 17.10.2024 ರಂದು ಆರೋಪಿ ರೂ.15,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 11.11.2024 ರಂದು ಆರೋಪಿ ರೂ.24,000/- ಹಣವನ್ನು ನನ್ನ ಗಂಡನಿಗೆ ಫೋನ್ ಪೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಮೊತ್ತವನ್ನು ಆರೋಪಿ ನಿಮ್ಮ ಗಂಡನ ಖಾತೆಗೆ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅವರ ವ್ಯವಹಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂತರ ದಿನಾಂಕ 01.12.2024 ರಂದು ಆರೋಪಿ ರೂ.1,36,000/- ಹಣವನ್ನು ನನ್ನ ಗಂಡನಿಗೆ ನಗದು ರೂಪದಲ್ಲಿ ಪಾವತಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಆರೋಪಿ ನನ್ನ ಗಂಡನಿಗೆ ಒಟ್ಟು ರೂ.6,50,000/- ಹಣ ಪಾವತಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಆರೋಪಿ ನಿಮ್ಮ ಗಂಡನಿಗೆ ರೂ.2,50,000/- ಬಾಕಿ ಮಾತ್ರ ಪಾವತಿ ಮಾಡಬೇಕಾಗಿತ್ತು ಎಂದರೆ ಸಾಕ್ಷಿ ನನಗೆ ನನ್ನ ಗಂಡನ ವ್ಯವಹಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನನ್ನೊಂದಿಗೆ ವ್ಯವಹಾರ ಮಾಡಿಲ್ಲ, ನನ್ನಿಂದ ಯಾವುದೇ ಸಾಲ ಪಡೆದುಕೊಂಡಿಲ್ಲ ಹಾಗೂ ನನಗೆ ಆತ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.

3. ನಾನು ಪಿ.ಯು.ಸಿ ವರೆಗೆ ಓದಿದ್ದೇನೆ. ಸಾಕ್ಷಿಗೆ ಆರೋಪಿಯ ಬ್ಯಾಂಕ್ ಖಾತಾ ಸ್ಟೇಟ್ ಮೆಂಟನ್ನು ತೋರಿಸಿ ಅದರಲ್ಲಿ ನಿಮ್ಮ ಗಂಡನ ಖಾತೆಗೆ ಹಣ ಪಾವತಿ ಮಾಡಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ದಿನಾಂಕ 04.03.2025 ರಂದು ನೀಡಿದ ಉತ್ತರ ನೋಟಿಸಿನಲ್ಲಿ ತನ್ನ ಖಾತೆಯ 061713, 016397 ಮತ್ತು 016398 ನಂಬರಿನ ಚೆಕ್ಕುಗಳು ನಿಮ್ಮ ಗಂಡನ ಹತ್ತಿರ ಇರುವುದಾಗಿ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಗಂಡನ ಹತ್ತಿರ ಆತನ ಚೆಕ್ ಇದ್ದವೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಲ್ಲದೇ ನಿಪಿ-1 ರ ಚೆಕ್ಕನ್ನು ಸಹ ಆರೋಪಿ ನನ್ನ ಗಂಡನಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕಿನಲ್ಲಿ ಆರೋಪಿ ಮೊತ್ತ ನಮೂದಿಸಿ ಸಹಿ ಮಾಡಿ ಕೊಟ್ಟಿದ್ದರು ಆದರೆ ಹೆಸರು ನಮೂದು ಮಾಡಿರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ, ಎಲ್ಲಾ ವಿವರ ನಮೂದಿಸಿಯೇ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ತೀರಿಕೊಂಡ ನಂತರ ನಾನು ನಿಪಿ-1 ರ ಚೆಕ್ಕನ್ನು ದುರುಪಯೋಗ ಮಾಡಿಕೊಂಡು ಅದರಲ್ಲಿ ನನ್ನ ಹೆಸರು ನಮೂದಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ಸಾಕ್ಷಿಗೆ ತೋರಿಸಿ ಅದರಲ್ಲಿನ ಹೆಸರು ಮಾತ್ರ ಬೇರೆ ಕೈಬರಹದಲ್ಲಿ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿ ಎಲ್ಲಾ ಒಂದೇ ಕೈಬರಹದಲ್ಲಿ ಇದೆ ಎಂದು ನುಡಿಯುತ್ತಾರೆ. ಆರೋಪಿ ದಿನಾಂಕ 12.01.2025 ರಂದು ಚೆಕ್ ನೀಡಿದ್ದಾರೆ ಎಂದು ನೀವು ಈಗಾಗಲೇ ಸಾಕ್ಷಿ ನುಡಿದಿದ್ದು, ನಿಪಿ-1 ರ ಚೆಕ್ಕಿನಲ್ಲಿ ದಿನಾಂಕ 06.02.2025 ಎಂದು ನಮೂದು ಇದೆ ಎಂದರೆ ಸಾಕ್ಷಿಯು ನನಗೆ ದಿನಾಂಕಗಳು ನಿಖರವಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ.

4. ಗಾಂಧಿನಗರದ ರಾಮುನಾಯಕ ಎಂಬುವವರ ಪರಿಚಯ ಇದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ರಾಮು ರವರಿಗೆ ನನ್ನ ಗಂಡ ಹಣ ಪಾವತಿ ಮಾಡಬೇಕಾಗಿತ್ತು ಅದಕ್ಕಾಗಿ ನನ್ನ ಗಂಡ ತನ್ನ ಹತ್ತಿರ ಇದ್ದ ಆರೋಪಿಯ ಚೆಕ್ಕುಗಳನ್ನು ರಾಮು ವರಿಗೆ ಕೊಡುವುದಾಗಿ ತಿಳಿಸಿದ್ದರು, ಆಗ ರಾಮು ರವರು ಆರೋಪಿಗೆ ಕರೆ ಮಾಡಿ ಸದರಿ ವಿಷಯವನ್ನು ತಿಳಿಸಿದ್ದರು ಎಂದರೆ ಸಾಕ್ಷಿಯು ನನಗೆ ರಾಮು ಎಂಬ ವ್ಯಕ್ತಿಯ ಪರಿಚಯವೇ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 13.12.2025 ರಂದು ನೀವು ಆರೋಪಿಯ ತಂಗಿಗೆ ಕರೆ ಮಾಡಿ ಈ ಪ್ರಕರಣವನ್ನು ಮಾತನಾಡಿ ರಾಜಿ ಮಾಡಿಕೊಳ್ಳೋಣ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿಯು ಕರೆ

ಮಾಡಿ ಮಾತನಾಡಿದ್ದೆನು ಆದರೆ ಈ ಪ್ರಕರಣದ ಬಗ್ಗೆ ಮಾತನಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಸಂಭಾಷಣೆ ಆರೋಪಿಯ ಮೊಬೈಲಿನಲ್ಲಿ ರೆಕಾರ್ಡಿಂಗ್ ಇರುತ್ತದೆ ಎಂದರೆ ಸಾಕ್ಷಿ ಬೇರೆ ವ್ಯವಹಾರಕ್ಕೆ ಸಂಬಂಧಿಸಿದ ಸಂಭಾಷಣೆ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಸದರಿ ಚೆಕ್ ಹಾಗೂ ರೂ.9 ಲಕ್ಷ ಹಣ ನೀಡಿರುವ ಬಗ್ಗೆ ಆರೋಪಿಯ ತಂಗಿಯೊಂದಿಗೆ ಮಾತನಾಡಿದ ಸಂಭಾಷಣೆಯನ್ನು ಆರೋಪಿಯ ಮೊಬೈಲಿನಲ್ಲಿ ಪ್ಲೇ ಮಾಡಿ ತೋರಿಸಲಾಗಿ ಸಾಕ್ಷಿ ಅದು ತಾವೇ ಮಾತನಾಡಿರುವುದು ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಖಾತೆಯ 061713 ಸಂಖ್ಯೆಯ ರೂ.8,50,000/- ಮೊತ್ತದ ಚೆಕ್ಕನ್ನು ನಾನು ಮಂಜುನಾಥ ರವರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಸಹ ಆರೋಪಿ ನನ್ನ ಗಂಡನಿಗೆ ಕೊಟ್ಟಿದ್ದರು ಹಾಗಾಗಿ ಅದು ನನ್ನ ಹತ್ತಿರ ಇತ್ತು ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಮಂಜುನಾಥ ರವರ ದಿನಾಂಕ 27.11.2025 ರಂದು ಬ್ಯಾಂಕಿಗೆ ಹಾಜರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 02.12.2025 ರಂದು Payment stopped by drawer ಎಂದು ಚೆಕ್ ಮರಳಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 09.12.2025 ರಂದು ಸದರಿ ಮಂಜುನಾಥ ರವರ ವಕೀಲರ ಮೂಲಕ ಆರೋಪಿಗೆ ನೋಟಿಸ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಈ ಹಂತದಲ್ಲಿ ನನಗೆ ಮಂಜುನಾಥ ರವರ ಪರಿಚಯ ಇದೆ, ಆತ ನನ್ನ ಗಂಡನ ಗೆಳೆಯ ಆಗಿದ್ದರು ಆದರೆ ನನಗೆ ಅವರ ವ್ಯವಹಾರಗಳ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಈ ಮೇಲಿನ ಫೋನ್ ಸಂಭಾಷಣೆಯಲ್ಲಿಯೂ ಸಹ ಮಂಜುನಾಥ ರವರಿಗೆ ಚೆಕ್ ಕೊಟ್ಟಿರುತ್ತೀ ಎಂದು ಮಾತು ಬಂದಿರುತತದೆ ಎಂದರೆ ಸಾಕ್ಷಿಯು ಸರಿ ಆದರೆ ಅದು ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 29.12.2025 ರಂದು ಆರೋಪಿ ಮಂಜುನಾಥ ರವರ ವಕೀಲರ ನೋಟಿಸ್ ಗೆ ಉತ್ತರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತನಗೆ ಮಂಜುನಾಥ ರವರ ಪರಿಚಯ ಇಲ್ಲ ಹಾಗೂ ಅವರಿಂದ ಯಾವುದೇ ಹಣ ಪಡೆದುಕೊಂಡಿಲ್ಲ ಎಂದು ಆರೋಪಿ ಸದರಿ ಉತ್ತರ ನೋಟೀಸಿನಲ್ಲಿ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲದೇ ಈ ಪ್ರಕರಣದ ಬಗ್ಗೆ ಹಾಗೂ ತನ್ನ ಖಾಲಿ ಚೆಕ್ಕುಗಳನ್ನು ನೀಡಿರುವ ಬಗ್ಗೆಯೂ ಸಹ ಆರೋಪಿ ಸದರಿ ಉತ್ತರ ನೋಟಿಸಿನಲ್ಲಿ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ಕನ್ನು ಮಂಜುನಾಥ ರವರಿಗೆ ನಾನೇ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ಮಂಜುನಾಥ ರವರು ಸೇರಿ ಆರೋಪಿಯ ಚೆಕ್ಕನ್ನು ದುರುಪಯೋಗ ಮಾಡಿಕೊಂಡಿರುವುದಾಗಿ ಆರೋಪಿ ದಿನಾಂಕ 05.12.2025 ರಂದು

ಯಾದಗಿರಿ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.)

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ